**ಮೂರನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ರವರ**
**ನ್ಯಾಯಾಲಯ, ಕನಕಪುರ**

**ಸಿ.ಸಿ ನಂ. 1443/2023**

ದಿನಾಂಕಃ**.03.06.2026** ರಂದು ಸಾಕ್ಷಿಗೆ ಮದ್ಯಾಹ್ನ **12.15** ಗಂಟೆಗೆ ಪ್ರಮಾಣ ವಚನ ಭೋದಿಸಲಾಯಿತು.

**DW-1**

| | | |
|---|---|---|
| ಹೆಸರು | - | ಹೆಚ್.ಎಂ. ಕೃಷ್ಣ |
| ತಂದೆ ಹೆಸರು | - | ಮರೀಗೌಡ |
| ವಯಸ್ಸು | - | **45** |
| ಉದ್ಯೋಗ | - | ಸರ್ಕಾರಿ ನೌಕರ |
| ವಿಳಾಸ | - | ಕನಕಪುರ |

**ಮುಖ್ಯವಿಚಾರಣೆ : ಆರೋಪಿ ಪರ ಶ್ರೀ ಎ.ಜಿ.ಆರ್ ವಕೀಲರಿಂದಃ**

ರುಕ್ಮಿಣಿ ಎನ್ನುವವರು ನನ್ನ ಮೇಲೆ ಪ್ರಕರಣ ದಾಖಲಿಸಿದ್ದಾರೆ. ಚೆಕ್ ಅಮಾನ್ಯವಾಗಿದೆ ಎಂದು ಈ ಪ್ರಕರಣ ದಾಖಲಿಸಿದ್ದಾರೆ. ಪಿರ್ಯಾದಿಯ ಗಂಡ ನನ್ನ ಮನೆಯಲ್ಲಿ ರೂ **6,80,000** ಕ್ಕೆ ಬೋಗ್ಯದ ಆಧಾರದ ಮೇರೆಗೆ ವಾಸ ವಾಗಿದ್ದರು ಅವರು ತೀರಿಕೊಂಡ ನಂತರ ಪಿರ್ಯಾದಿ ಅಲ್ಲಿ ವಾಸವಾಗಿದ್ದರು.

**2019** ನೇ ಸಾಲಿನಲ್ಲಿ ಎರಡು ವರ್ಷಕ್ಕೆ ಬೋಗ್ಯಕ್ಕೆ ಇದ್ದರು. ಅದಕ್ಕೆ ಸಂಬಂಧಿಸಿದಂತೆ ಬೋಗ್ಯದ ಕರಾರು ಪತ್ರ ಆಗಿತ್ತು. ಬೋಗ್ಯದ ಸ್ವಲ್ಪದ ಹಣವನ್ನು ಚೆಕ್ ಮುಖಾಂತರ ಕೊಟ್ಟಿದ್ದು ಉಳಿದ ಹಣವನ್ನು ನಗದು ಮೂಲಕ ಕೊಟ್ಟಿದ್ದರು. **2022** ನೇ ಸಾಲಿನಲ್ಲಿ ಬೋಗ್ಯ ಬಿಡುಗಡೆ ಆಯಿತು. ಬೋಗ್ಯ ಬಿಡುಗಡೆ ಆದಾಗ ನಗದಾಗಿ ರೂ **5** ಲಕ್ಷ ಕೊಟ್ಟಿದ್ದೆ. ಉಳಿದ ಹಣವನ್ನು ಕೊಡಲು **3** ತಿಂಗಳ ಸಮಯಕ್ಕೆ ಕರಾರು ಆಗಿತ್ತು. ಸದರಿ ವ್ಯವಹಾರದಲ್ಲಿ **3** ರಿಂದ **5** ತಿಂಗಳ ಅವಧಿಯೊಳಗೆ ಚೆಕ್ಕನ್ನು ನಗದೀಕರಣಕ್ಕೆ ಸಲ್ಲಿಸಬೇಕೆಂದು ಕರಾರು ಆಗಿತ್ತು. ಹಣದ ಭದ್ರತೆಗಾಗಿ ಷರಾ ಬರೆದು ನಾನು ಚೆಕ್ ಕೊಟ್ಟಿದ್ದೆ. ಖರ್ಚು ವೆಚ್ಚಕ್ಕೆ ಹಣ ಮುರಿದು ಕೊಂಡು ಬಾಕಿ ಹಣ ಕೊಡಬೇಕೆಂದು ಕರಾರು ಆಗಿತ್ತು. ಹೆಚ್ಚಿನ ಜಖಂ ಆದಾಗ ಹೆಚ್ಚಿನ ಹಣ ಮುರಿದುಕೊಳ್ಳಬೇಕೆಂದು ಕರಾರು ಆಗಿತ್ತು.

ಬಾಕಿ ಹಣವನ್ನು ಕೊಡಿ ಎಂದು ಪಿರ್ಯಾದಿ ಯಾವತ್ತೂ ನನ್ನ ಬಳಿ ಬಂದಿರುವುದಿಲ್ಲ. ಪಿರ್ಯಾದಿ ನೋಟಿಸ್ ಕೊಟ್ಟ ನಂತರ ನನಗೆ ವಿಚಾರ ಗೊತ್ತಾಯಿತು. ನಾನು ಪ್ರತ್ಯುತ್ತರ ನೋಟಿಸ್ ಕೊಟ್ಟಿರುವುದಿಲ್ಲ. ಪಿರ್ಯಾದಿ ಚೆಕ್ಕನ್ನು ಯಾವಾಗ ನಗದೀಕರಣಕ್ಕೆ ಸಲ್ಲಿಸಿದ್ದರು ಎಂದು ನನಗೆ ಗೊತ್ತಿಲ್ಲ. ಬ್ಯಾಂಕಿನವರು ಏನು ಎಂದು ಹಿಂಬರಹ ಕೊಟ್ಟಿದ್ದರು ಎಂದು ನನಗೆ ಗೊತ್ತಿಲ್ಲ. ಪಿರ್ಯಾದಿ ಕೊಟ್ಟ ನೋಟಿಸ್ ನನಗೆ ತಲುಪಿದೆ. ವಕೀಲರು ಮುಖಾಂತರ ನನಗೆ ನೋಟಿಸ್ ಕೊಟ್ಟಾಗ ಅದು ನನಗೆ ತಲುಪಿತ್ತು. ನಿ.ಪಿ.3 ನೋಟಿಸ್ ನನಗೆ ತಲುಪಿತ್ತು.

ನನಗೆ ನಷ್ಟ ಭರ್ತಿ ಹಣ ಕೊಟ್ಟರೆ ನಾನು ರಾಜಿ ಮಾಡಿಕೊಳ್ಳಲು ತಯಾರಿದ್ದೇನೆ. ನಿ.ಪಿ.1 ರಲ್ಲಿ ಹೆಸರನ್ನು ನಾನು ಬರೆದಿರುವುದಿಲ್ಲ ಪಿರ್ಯಾದಿಯೇ ಬರೆದಿದ್ದಾರೆ. ಜಾಧವ್ ಎಂಬ ವಕೀಲರು ಮತ್ತು ರಾಜು ಎಂಬ ಬ್ರೋಕರ್ ಬೋಗ್ಯಕ್ಕೆ ಮನೆಯನ್ನು ಕೊಡಿಸಿದ್ದರು. ಜಾಧವ್ ಎಂಬ ವಕೀಲರಿಗೆ ನನಗೆ ಆದ ನಷ್ಟವನ್ನು ಬಂದು ಒಂದು ಬಾರಿ ನೋಡಿ ಎಂದು ನಾನು ಹೇಳಿದ್ದೆ. ಪಿರ್ಯಾದಿಗೆ ನಾನು ಹೇಳಿರುವುದಿಲ್ಲ. ಅವರು ಮನೆ ಖಾಲಿ ಮಾಡಿಕೊಂಡು ಹೋದ ನಂತರ ಜಾಧವ ಎಂಬ ವಕೀಲರಿಗೆ ನಾನು ಹೇಳಿದ್ದೆ. ಪಿರ್ಯಾದಿ ನನ್ನನ್ನು ಭೇಟಿ ಆಗಿರುವುದಿಲ್ಲ ನಾನು ಆಕೆಯನ್ನು ಕೇಳಿರುವುದಿಲ್ಲ. ಪಿರ್ಯಾದಿಯ ಗಂಡ ಮಹದೇವ ಮತ್ತು ನನ್ನ ನಡುವೆ ಬೋಗ್ಯದ ಕರಾರು ಆಗಿತ್ತು. ಬೋಗ್ಯದ ಕರಾರು ಆಗುವಾಗ ಪಿರ್ಯಾದಿ ಆಕೆಯ ಗಂಡನೊಂದಿಗೆ ಇರಲಿಲ್ಲ. ಅವರು ಪ್ರತ್ಯೇಕವಾಗಿ ವಾಸಮಾಡುತ್ತಿದ್ದಾರಾ ಎಂದರೆ ನನಗೆ ಗೊತ್ತಿಲ್ಲ. ಮನೆಯನ್ನು ಖಾಲಿ ಮಾಡುವಾಗ ಪಿರ್ಯಾದಿ ಕರಾರಿನಲ್ಲಿ ಷರಾ ಬರೆದು ಸಹಿ ಮಾಡಿದ್ದಾರೆ .

ನನಗೆ ನಷ್ಟವಾಗಿರುವ ಹಣವನ್ನು ಕೊಟ್ಟರೆ ನಾನು ರಾಜಿ ಮಾಡಿಕೊಳ್ಳಲು ತಯಾರಿದ್ದೇನೆ. ಈ ಪ್ರಕರಣವನ್ನು ವಜಾ ಮಾಡಬೇಕೆಂದು ಕೋರಿಕೊಳ್ಳುತ್ತೇನೆ.

**ಪಾಟೀಸವಾಲುಃ** ಪಿರ್ಯಾದಿ ಪರ ವಕೀಲರು ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು.

(ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಮದ್ಯಾಹ್ನ **12.35** ಗಂಟೆಯವರೆಗೆ ಪಡೆದುಕೊಂಡಿರುತ್ತೇನೆ ಎಂದು ಧೃಢೀಕರಿಸುತ್ತೇನೆ)

ಓದಿ ಹೇಳಿ ಕೇಳಿ ಸರಿ ಇದೆ,

**ಮೂರನೇ ಅಪರ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್ ಸಿ., ಕನಕಪುರ.**